ಶ್ರೀ ಕೆ. ಎಂ. ತಮ್ಮಯ್ಯ .—ಹಿಂದೆ ನಿಷದ್‌ಬಾಗ್ ಸ್ಥಳವನ್ನು ಅಕ್ವೈರ್ ಮಾಡಿಕೊಳ್ಳಬೇಕೆಂದು ತೀರ್ಮಾನವಾಗಿತ್ತು. ಮತ್ತೆ ಯುನೈಟೆಡ್ ಫ್ರಂಟ್ ಪ್ರೆಸಿಡೆಂಟ್ ಕೌನ್ಸಿಲ್ ಬಂದಾಗ್ಗೆ ಬೇಡವೆಂದ ಹೇಳಿತ್ತು. ಈಗ ಸರ್ಕಾರದವರು ಅದನ್ನು ಅಕ್ವೈರ್ ಮಾಡಿಕೊಳ್ ಬೇಕೆಂದು ಆಜ್ಞೆಕೊಡಲು ಕಾರಣವೇನು?

ಶ್ರೀ ಬಿ. ಎಂ. ಪಾಟೀಲ್.—ಮೊದಲು ಇದನ್ನು ಅಕ್ವೈರ್ ಮಾಡುವುದಕ್ಕೆ ಪುರಸಭೆಯವರು ಮತ್ತು ಟ್ರಸ್ಟ್‌ಬೋರ್ಡಿನವರು ಒಪ್ಪಿಕೊಂಡಿದ್ದರು. ಆದರೆ ಪುರಸಭೆಯವರು ಸೇಕಡಾ ೫೦ ಭಾಗದಷ್ಟು ಅಕ್ವಿಸಿಷನ್ ಖರ್ಚನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಆದರೆ ಈಗಿನ ಪುರಸಭಾಧ್ಯಕ್ಷರಿಂದ ಆದರ ಮೇಲೆ ಯಾವ ವರದಿಯೂ ಬಂದಿಲ್ಲ.

ಶ್ರೀ ಕೆ. ಎಂ. ತಮ್ಮಯ್ಯ.—ಇದು ಈಗ ಒಳ್ಳೆಯ ಜಾಗದಲ್ಲಿದ್ದು ಬಹಳ ದೊಡ್ಡದಾಗಿರುವುದರಿಂದ ಅಲ್ಲಿ ಸ್ಮಾರಕ ಕಟ್ಟಡಗಳನ್ನು ಕಟ್ಟುವುದರಿಂದ ಮೈಸೂರಿನ ಸೌಂದರ್ಯಕ್ಕೆ ಕುಂದು ಬರುವುದಿಲ್ಲವೆ?

ಶ್ರೀ ಬಿ. ಎಂ. ಪಾಟೀಲ್.—ಈಗ ಕಟ್ಟಡಗಳನ್ನು ಕಟ್ಟುವ ಉದ್ದೇಶದಿಂದ ಅದನ್ನು ಅಕ್ವೈರ್ ಮಾಡುತ್ತಾ ಇಲ್ಲ. ಅಲ್ಲಿ ಗಾರ್ಡನ್ ಮಾಡಬೇಕೆಂದು ಹೇಳಿದ್ದೇವೆ.

SRI AZEEZ SAIT:—Is it not a fact that on the resolution passed by the Municipal Council that the Municipal Council is not in a position to invest so much money the proposed acqisition of these sites to form a park is dropped and is it not also a fact the matter is stayed by the High Court of Mysore ?

1-30 P.M.

SRI B. M. PATIL:—I have already said that the Municipal Council have resolved that they are not prepared to bear 50% of the cost of acquisition. It is also a fact that the matter is pending before the High Court.

ಶ್ರೀ ಎನ್. ಹುಚ್ಚಮಾಸ್ತಿಗೌಡ:—ಸ್ವಾಮಿ, ಆ ಸ್ಥಳವನ್ನು ಮಹಾತ್ಮಗಾಂಧಿ ಮತ್ತು ಕಸ್ತೂರಬಾ-ಗಾಂಧಿ ಅವರುಗಳ ಸ್ಮಾರಕಗಳನ್ನು ನಿರ್ಮಿಸುವ ಉದ್ದೇಶಕ್ಕಾಗಿ ಅಕ್ವೈರ್ ಮಾಡಿದ್ದು ನಿಜ ಎಂದು ಹೇಳಿದ್ದೀರಿ, ಆದರೆ ಇವೊತ್ತು ಅಲ್ಲಿ ಆ ಉದ್ದೇಶವನ್ನು ಬದಲಾಯಿಸಿಕೊಳ್ಳುವ ಸಂದರ್ಭ ಇದೆ. ಆದ್ದರಿಂದ ಸರ್ಕಾರದವರು ಆ ಜಮೀನನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್:—ಯಾವ ಉದ್ದೇಶಕ್ಕಾಗಿ ಅದನ್ನು ಅಕ್ವೈರ್ ಮಾಡಲಾಗಿದೆಯೋ ಆ ಉದ್ದೇಶಕ್ಕಾಗಿಯೇ ಅದನ್ನು ಉಪಯೋಗ ಮಾಡಬೇಕಾಗುತ್ತದೆ.

REORGANISATION OF SECONDARY EDUCATION

415. SRI N. A. CHANNE GOWDA (Pandavapura).—
Will the Minister for Education be pleased to state:—

(*a*) whether the Government has appointed a Special Officer for School Reorganisation in the State;

(*b*) if so, the period up to which he continues to be in the present assignment;

(c) his functions and jurisdicti n?

SRI K. V. SHANKARA GOWDA (MINISTER FOR EDUCATION).—

(a) Yes.

(b) Up to 16th August 1970 Forenoon.

(c) To advise the State Government on matters connected with the reorganisation of the Department of Public Instruction with special reference to Primary Education, Secondary education and Teachers training. He has jurisdiction over the entire State.

ಶ್ರೀ ಎನ್ ಎ. ಚನ್ನೇಗೌಡ:—ಸ್ವಾಮಿ ರಾಜ್ಯದಲ್ಲಿ ಶಾಲಾ ಪುನರ್ ವ್ಯವಸ್ಥೆಗಾಗಿ ವಿಶೇಷಾಧಿಕಾರಿ ಯೊಬ್ಬರನ್ನು ಸರ್ಕಾರದವರು ನೇಮಿಸಿದ್ದಾರೆ ಎಂದು ಹೇಳಿದ್ದೀರಿ, ಹಾಗಾದರೆ ಅವರು ಯಾರು? ಅವರು ರಾಜ್ಯ ಸರ್ಕಾರದ ಸೇವೆಯಿಂದ ಯಾವಾಗ ನಿವೃತ್ತರಾದರು. ? ಮತ್ತು ಯಾವಾಗ ಅವರನ್ನು ಪುನರ್ ನೇಮಕ ಮಾಡಿದ್ದೀರಿ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ:-ಆ ಅಧಿಕಾರಿಗಳು ಶ್ರೀ ಎ. ಸಿ. ದೇವೇಗೌಡರು, ಅವರು ರಾಜ್ಯ ಸರ್ಕಾರದ ವಿದ್ಯಾ ಇಲಾಖೆಯ ಡೈರೆಕ್ಟರಾಗಿದ್ದರು. ಅವರು ಯಾವಾಗ ರಿಟೈರ್ ಆದರು ಎನ್ನುವ ಮಾಹಿತಿ ಇಲ್ಲಿ ಇಲ್ಲ. ಅವರು ಪುನರ್‌ನೇಮಕವಾದದ್ದು ೧೫-೮-೧೯೬೮ ರಲ್ಲಿ.

ಶ್ರೀ ಎನ್. ಎ. ಚನ್ನೇಗೌಡ:—ಇವರಿಗೆ ಏನು ಸಿಬ್ಬಂದಿಯನ್ನು ಒದಗಿಸಿದ್ದೀರಿ, ಇದುವರೆಗೂ ಇವರು ಏನೇನು ಸಲಹೆಗಳನ್ನು ಕೊಟ್ಟಿದ್ದಾರೆ, ಆ ಸಲಹೆಗಳ ಪೈಕಿ ಎಷ್ಟು ಸಲಹೆಗಳನ್ನು ತಾವು ಒಪ್ಪಿಕೊಂಡು ಅವುಗಳನ್ನು ಕಾರ್ಯಗತ ಮಾಡಿದ್ದೀರಿ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅವರಿಗೆ ಒಬ್ಬರು ಸ್ಟೆನೋಗ್ರಾಫರ್ ಒಬ್ಬ ಳನೇ ದರ್ಜೆಯ ಸರ್ವೆಂಟ್ ಅನ್ನು ಕೊಟ್ಟಿದೆ. ಅವರು ರಾಜ್ಯಾದ್ಯಂತ ಸಂಚಾರ ಮಾಡಿ ಅನೇಕ ಸಭೆಗಳನ್ನು ನಡೆಸಿ, ಅನೇಕ ಪ್ರೈಮರಿ ಮತ್ತು ಹೈಸ್ಕೂಲು ಟೀಚರ್ಸ್‌ಅನ್ನು ಭೇಟಿ ಮಾಡಿ ಕೊಠಾರಿಕಮಿಷನ್ನಿನ ಅನೇಕ ಶಿಫಾರಸ್ಸುಗಳನ್ನು ಪರಿಶೀಲನೆಮಾಡಿ ಅವರು ಸುಮಾರು ೨೦ ಸಲಹೆಗಳನ್ನು ಸರ್ಕಾರಕ್ಕೆ ಕಳುಹಿಸಿ-ಕೊಟ್ಟಿದ್ದಾರೆ. ಅದರಲ್ಲಿ ಬಹುಮಟ್ಟಿಗೆ ಸುಮಾರು ೧೫-೧೬ ಸಲಹೆಗಳನ್ನು ಸರ್ಕಾರದವರು ಅಂಗೀಕರಿಸಿ ಅವುಗಳನ್ನು ಕಾರ್ಯಗತ ಮಾಡುವುದರಲ್ಲಿ ಪ್ರವೃತ್ತರಾಗಿದ್ದಾರೆ.

ಶ್ರೀ ಕೆ. ಎಂ. ತಮ್ಮಯ್ಯ:—ಹಣದ ಅಭಾವದಿಂದ ಖರ್ಚನ್ನು ಕಡಿಮೆ ಮಾಡಬೇಕು ಎಂದು ಹೇಳು-ತ್ತಿದ್ದೀರಿ, ಹೀಗಿರುವಾಗ ಇಂಥಾ ಅಧಿಕಾರಿಗಳನ್ನು ಇಟ್ಟುಕೊಂಡು, ಅವರಿಗೆ ಏನಾದರೂ ಕೆಲಸ ಇಲ್ಲದೆ ಅವರು ಊರೂರು ತಿರುಗಿಕೊಂಡು ಬರುವುದಕ್ಕೆ ಸಂಬಳ ಕೊಡುವುದು ಅನ್ಯಾಯವಲ್ಲವೇ ? ಇದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ:-ಅದೇನೂ ಅನ್ಯಾಯವಾಗಿಲ್ಲ. ದುರುಪಯೋಗವಾಗಿಲ್ಲ. ಈ ವಿಶೇಷ ಅಧಿಕಾರಿಗಳ ನೇಮಕದಿಂದ ವಿದ್ಯಾ ಇಲಾಖೆಯಲ್ಲಿ ಉಪಯುಕ್ತವಾದ ಕೆಲಸವಾಗಿದೆ. ಕೊಠಾರಿ ಕಮಿಷನ್ನಿನವರು ಮಾಡಿರತಕ್ಕ ಬಹಳ ಮಹತ್ತರವಾದ ಸುಧಾರಣೆಗಳನ್ನು ಜಾರಿಗೆ ತರುವುದಕ್ಕೆ ನುರಿತ ತಜ್ಞರ ನೆರವು ಬೇಕಾದ್ದರಿಂದ ಈ ಅಧಿಕಾರಿಗಳನ್ನು ನೇಮಕ ಮಾಡಿಕೊಂಡು ನೆನ್ನೆ ಮಾನ್ಯ ಶಿಕ್ಷಣ ಸಚಿವರು ಈ ಸಭೆಯಲ್ಲಿ ಹೇಳಿದಂತೆ ಕೊಠಾರಿ ಕಮಿಷನ್ನಿನ ಶಿಫಾರಸ್ಸುಗಳನ್ನು ಜಾರಿಗೆ ತಂದಿದ್ದೇವೆ.

ಶ್ರೀ ಎಸ್ ಎಂ. ಗುರೆಡ್ಡಿ:-ಈಗ ತಾವೇನು ವಿಶೇಷ ಅಧಿಕಾಸಿಗಳನ್ನು ನೇಮಕ ಮಾಡಿಕೊಂಡಿದ್ದೀರಿ, ಇವರು ಪರ್ಮನೆಂಟಾಗಿ ಉಳಿಯುತಾರೆಯೇ ಅಥವಾ ಈ ಕೆಲಸ ಮುಗಿಯುವವರೆಗೂ ಇರುತ್ತಾರೆಯೋ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ:—ಇದು ಖಾಯಂ ಆದ ಹುದ್ದೆಯಲ್ಲ. ಇವರು ಈ ಕೆಲಸ ಮುಂಗಿಯುವವರೆಗೂ ಇರುತ್ತಾರೆ.

ಶ್ರೀ ಬಿ. ಎಂ. ಇದಿನಬ್ಬ:—ಶಿಕ್ಷಣ ಕ್ಷೇತ್ರ ಬಹಳ ಮಹತ್ವವಾದದ್ದು. ಆದ್ದರಿಂದ ಇಂಥಾ ಒಂದು ನೇಮಕವನ್ನು ಮಾಡಿಕೊಂಡಿರಿ ನಾವು ಭಾವಿಸುತ್ತೇವೆ. ಆದ್ದರಿಂದ ಅವರು ಕೊಟ್ಟಿರತಕ್ಕ ಸಲಹೆಗಳು ತೃಪ್ತಿಕರವಾಗಿವೆಯೇ? ಅವುಗಳನ್ನು ಕಾರ್ಯಗತ ಮಾಡುತ್ತೀರಾ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ:—ಹೌದು. ತೃಪ್ತಿಕರವಾಗಿವೆ. ಮತ್ತು ಅವು ಬಹಳ ಮಹತ್ವಪೂರಿತವಾಗಿವೆ. ಅವರ ಶಿಫಾರಸ್ಸುಗಳನ್ನು ಒಪ್ಪಿಕೊಂಡು ಕಾರ್ಯಪ್ರವೃತ್ತರಾಗಿ ಅನೇಕ ಶಿಫಾರಸ್ಸುಗಳನ್ನು ಜಾರಿಗೆ ತಂದಿದ್ದೇವೆ.

ಶ್ರೀ ಬಿ. ದೊಡ್ಡಬೋರೇಗೌಡ:—ಈ ಅಧಿಕಾರಿಗಳ ನೇಮಕದಿಂದ ಇಪ್ಪೊತ್ತಿನವರೆಗೂ ಸರ್ಕಾರಕ್ಕೆ ಒಟ್ಟು ಖರ್ಚು ಎಷ್ಟು ಬಂದಿದೆ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ:—ಒಟ್ಟಿನ ಮೊತ್ತದ ಬಗ್ಗೆ ಮಾಹಿತಿ ಇಲ್ಲ. ಆ ಅಧಿಕಾರಿಗಳಿಗೆ ಒಂದು ತಿಂಗಳಿಗೆ ಒಂದು ಸಾವಿರ ರೂಪಾಯಿಗಳನ್ನು ಕೊಡಲಾಗುತ್ತಿದೆ. ಮತ್ತು ಇದರ ಜೊತೆಗೆ ಅವರಿಗೆ ಒಬ್ಬರು ಸ್ಟೆನೋಗ್ರಾಫರ್ ಮತ್ತು ಒಬ್ಬ ನಾಲ್ಕನೆ ದರ್ಜೆ ಸರ್ವೆಂಟ್ ಅನ್ನು ಕೊಟ್ಟಿದೆ.

RURAL HOUSING SCHEME IN SHIMOGA DISTRICT

422. Sri Abdul Khuddus Anwar (Bhadravathi).— Will the Minister for Development be pleased to state :—

The total amount spent on Rural Housing Scheme in Shimoga District during 1967-68, 1868-69 (Talukwise figures may be furnished)?

Sri B. L. Gowda (Deputy Minister for Co-Operation):—

1967-68

Under L.I.C. Funds

		Rs.
1.	Hosanagar	50,900-00
2.	Sagar	9,600-00
	Total ...	60,500-00

1968-69

		Rs.
1	Hosanagar	4,260-00
2	Sagar	16,600-00
	Total ...	20,860-00
	Grand Total	1,34,360-00

1967-68

Under G.O.I. Funds

	Rs.
Shimoga	21,500-00
Sorab	1,000-00
Total ...	22,500-00

1968-69

	Rs.
Shimoga	26,600-00
Sorab	2,400-00
Honnali	1,500-00
Total ...	30,500-00